ಅಂದರು. 'ಅಪ್ಪಾ ಈಗೇನು... ಊರಲ್ಲಿ ಜಮೀನು ರೇಟು ಎಷ್ಟದೋ ಅಷ್ಟೇ ತಗೋ... ಆ ದುಡ್ಡಲ್ಲಿ ನಿನ್ನಾಸೆಯಂಗೆ ಸಿಟಿಯಲ್ಲಿ ಸೈಟೂ ತಗಂಬೋದು. ಜತ್ಗೆ ನಮ್ ಹೊಲದ ಬದಿಗೆ ಐತೆಲ್ಲಾ ನಾಗೇಶಣ್ಣಂದು ಹೊಲ, ಅದನ್ನೂ ಮಾತಾಡಿ ಕೊಡ್ಸು. ಎರ್ಡ್ ಎಕ್ರೆ ಆತದೆ...' ಅಂದ ಸಂಜೀವನನ್ನು ಗೌಡರು ಸೋಜಿಗದಿಂದ ನೋಡಿದರು. ಸಮಾಜ ಕಲ್ಯಾಣ ಇಲಾಖೆಯ 'ಅಲೆಮಾರಿ ಕೋಶ'ದ ವಿವರ ಹಾಗೂ ಸರ್ಕಾರದ ಭೂಮಿ ಕೊಳ್ಳುವ ಕಾರ್ಯಕ್ರಮವನ್ನು ಅವರಿಗೆ ಅರ್ಥವಾಗುವ ಹಾಗೆ ವಿವರಿಸಿದನು. 'ನಮ್ಮ ಮನೆ, ತ್ವಾಟ, ವಲ್ಗಳಗೆ ಗೇಯ್ದು ಗೇಯ್ದು ನಮ್ ಸಂಸಾರ ಸಾಕೋ ಜನ್ಗುಳು ವರ್ಸೋಂಬತ್ ಕಾಲುಕ್ಕೂ ಅಂಗೇ ಇರ್ಬೇಕಾ... ಬರ್ಕೊಂಡನ ಬಿಡಪ್ಪ. ಅವುನ್ಗೂ ನಂದು ಅಂತ ಒಂದಿಷ್ಟಗಲ ಜಾಗ ಇರ್ಲಿ...' ಅಂದು ಮಗನ ಜೊತೆ ನಿಂತು ಜಯಮ್ಮನವರು ಮಾತನಾಡಿದ ಮೇಲೆ ಗೌಡರಿಗೂ ಏನೋ ಸಾರ್ಥಕ ಭಾವ ಮೂಡಿತು.

ಸಂಜೀವ ಬೆಳಗ್ಗೆಯೇ ಗೆಳೆಯರ ಜತೆ ದೇವರ ಮನೆಗೆ ಬಂದ. ಚೆಲುವಿ ಅಪರೂಪಕ್ಕೆ ಪಲಾವು ಮಾಡಿದ್ದಳು. ರಾಣಿ ದೇವರ ತಲೆಗೆ ಎಣ್ಣೆ ತಟ್ಟುತ್ತಿದ್ದಳು. 'ಮಾಮ' ಎಂದವನ ಎದುರು ಅವನೇ ತಂದುಕೊಟ್ಟಿದ್ದ 'ಕ್ಯಾಸ್ಟ್ ಮ್ಯಾಟರ್ಸ್' ಇಂಗ್ಲಿಷ್ ಪುಸ್ತಕ ಹಿಡಿದು ಹಾಜರಾದಳು ಚೆಲುವಿ. ರಾಣಿ ಮತ್ತು ದೇವರು ಹೊರಗೆ ಬರುವ ಹೊತ್ತಿಗೆ ಲಂಕೆಪ್ಪನವರು, ನಾಗೇಶಪ್ಪ ಹಾಗು ಭರಮಪ್ಪಗೌಡರೂ ಬಂದರು. ಸಮಾಜ ಕಲ್ಯಾಣಾಧಿಕಾರಿ ಶ್ರೀಪಾದ ಭಟ್ಟರ ಸ್ಕೂಟರ್ರೂ ಕಿರ್ ಎಂದು ಸದ್ದು ಮಾಡುತ್ತಾ ನಿಂತಿತು. ದೇವರಿಗೆ ಏನೂ ಅರ್ಥವಾಗಲಿಲ್ಲ. ಯಾವುದೋ ಎಲೆಕ್ಷನ್ನು ಬಂದಿರಬೇಕು ಅಂದುಕೊಂಡ.

ಶ್ರೀಪಾದ ಭಟ್ಟರು, 'ತಾವೇನೋ ದೇವರು' ಎಂದ ಪ್ರಶ್ನೆಗೆ ತಲೆಯಾಡಿಸುವ ಮೊದಲೇ, 'ಎಲ್ಲಿ ನಿಮ್ಮ ಹೆಂಡತಿ ಮತ್ತು ಮಗಳು... ಕರೀರಿ' ಎಂದರು. ಮೂವರೂ ಮುಂದೆ ಬಂದರು. 'ನೋಡಿ ಇವ್ರೇ... ನಮ್ಮ ಇಲಾಖೆ ನಿಮಗೆ ಎರಡು ಎಕರೆ ಜಮೀನು ಕೊಡಿಸುತ್ತಿದೆ. ಅಂಬೇಡ್ಕರ್ ಅಭಿವೃದ್ಧಿ ನಿಮಗದ ಅಧಿಕಾರಿಗಳು ಇದಕ್ಕೆ ಒಪ್ಪಿ ಸಹಿ ಮಾಡಿದಾರೆ. ನಿಮ್ಮ ಮೂವರ ಹೆಸರಿಗೂ ರಿಜಿಸ್ಟರ್ ಮಾಡಿಸಲಾಗುತ್ತದೆ. ಎಲ್ಲಿ ಮೂರೂ ಜನ ಇಲ್ಲಿ ಸೈನ್ ಮಾಡಿ...' ಅಂದ



ಶ್ರೀಪಾದ ಭಟ್ಟರನ್ನು ವಿಚಿತ್ರವಾಗಿ ನೋಡಿದ ದೇವರಿಗೆ ಲಂಕೆಪ್ಪನವರು ವಿವರಿಸಿದರು. 'ನೋಡ್ ದೇವ್ರೆ... ಭರಮಪ್ಪ ಗೌಡರು ಮತ್ತವರ ಮಗ ಸಂಜೀವ ಸೇರಿಕೊಂಡು ನೀನಿಷ್ಟು ವರ್ಷ ಉಳುಮೆ ಮಾಡುತ್ತಿದ್ದ ಕೆಳಗಿನ ತುಂಡ ಮತ್ತು ಪಕ್ಕದ ನಾಗೇಶಪ್ಪನ ತುಂಡ ಸೇರಿ ಎರಡು ಎಕರೆ ಭೂಮಿನ ಸರ್ಕಾರದ ಮೂಲಕ ನಿನಗೆ ಮಾರ್ತಾವ್ರೆ. ದುಡ್ಡನ್ನ ಅವ್ರಿಗೆ ಸರ್ಕಾರ ಕೊಡ್ತದೆ... ಇನ್ನ ಭೂಮಿ ನಿಂದೇ...' ನಡುಗುವ ಕೈಗಳನ್ನು ಎಲ್ಲರ ಮುಂದೆ ಮುಗಿದು ನಿಂತ ದೇವರನ್ನು ಹಿಡಿದ ಸಂಜೀವ, 'ಮಾಮ ನೀನು ಕೈ ಮುಗಿಬೇಕಾಗಿರದು ಅವ್ರಿಗೆ...' ಅಂದು ನಡುಮನೆಯಲ್ಲಿದ್ದ ಬಾಬಾ ಸಾಹೇಬ್ ಅಂಬೇಡ್ಕರರ ಫೋಟೊ ತೋರಿಸಿದ... ಲಂಕೆಪ್ಪ ಮತ್ತು ಭರಮಪ್ಪ ಗೌಡರು ತಮ್ಮ ಎಪ್ಪತ್ತರ ಆಸುಪಾಸಿನ ವಯೋಮಾನದ ಕೈಗಳಿಂದ ಚಪ್ಪಾಳೆ ಹಾಕತೊಡಗಿದರು. ಎಲ್ಲರೂ ಕೈಜೋಡಿಸಿದರು...

ಚೆಲುವಿ ಸಂಜೀವನ ಕಡೆಗೆ ನೋಡುತ್ತಾ ತಾನು ಹಿಡಿದುಕೊಂಡಿದ್ದ ಪುಸ್ತಕವನ್ನು ಎದೆಗಪ್ಪಿಕೊಂಡಳು. ವಿಕಾಸ, ಉಮಾಶಂಕ್ರ, ಬಸು ಮತ್ತು ಹರ್ಷ ಗೆಳೆಯ ಸಂಜೀವನನ್ನು ಬಿಗಿದಪ್ಪಿದರು. ಎಲ್ಲರೂ ನಿಂತಿರುವಾಗಲೇ ದೇವರು ಲಗುಬಗೆಯಿಂದ ಸಲಿಕೆ ಹೆಗಲಿಗೇರಿಸಿ ಹೊಲದ ಕಡೆಗೆ ಹೊರಟ... ಅವನ ಕಾಲುಗಳಲ್ಲಿ ಇನ್ನಷ್ಟು ತಾರುಣ್ಯ ತುಳುಕುತ್ತಿತ್ತು. ದೇವರನ್ನೇ ಗಮನಿಸುತ್ತಿದ್ದ ರಾಣಿಗೆ ಅವನು ಹೊಲದ ಕಡೆ ಹೋಗುವುದನ್ನು ಕಂಡು ಬೆಂಗಳೂರಿನ ಬಳೇಪೇಟೆಯ ಬೀದಿ ನೆನಪಾಯಿತು. ●